ಸಾಕ್ಷಿಯನ್ನು ದಿನಾಂಕಃ 25/06/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ**

ನಾವು ಕುಟುಂಬದಲ್ಲಿ ಒಟ್ಟು 5 ಜನ ಇದ್ದೇವೆ. ಈಗ ನಾವು ಸದ್ಯ ತಾಯಿ, ನಾನು ಮತ್ತು ನನ್ನ ಇಬ್ಬರು ಅಕ್ಕಂದಿರು ಇದ್ದೇವೆ. ನಾನು ಎಮ್ ಬಿ ಎ ಪದವಿಧರನಾಗಿದ್ದೇನೆ. ಈಗ ನನ್ನ ವಯಸ್ಸು 32 ವರ್ಷ. ಈ ಪ್ರಕರಣದಲ್ಲಿ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಏನು ಬರೆದು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿ ನಿಮಗೆ ಪ್ರತಿವಾದಿ ಕುಟುಂಬದವರ ಪರಿಚಯ ಇದೆ ಎಂದರೆ ಇಲ್ಲ ಎಂದು ಹೇಳುತ್ತಾರೆ. ಕರಾರು ಪತ್ರ ಆಗಿದೆ ಎನ್ನುವ ಸಮಯದಲ್ಲಿ ಪರಿಚಯ ಆಗಿತ್ತು, ಅದಕ್ಕಿಂತ ಮುಂಚೆ ಪರಿಚಯ ಇರಲಿಲ್ಲ ಎಂದು ಹೇಳುತ್ತಾರೆ. ನನಗೆ ಖರೀದಿ ವ್ಯವಹಾರ ಆಗಿದೆ ಎನ್ನುವ ಸಮಯದ ಬಗ್ಗೆ ವೈಯಕ್ತಿಕವಾದ ಜ್ಞಾನ ಇದೆ. ಖರೀದಿ ಬಗ್ಗೆ ಮಾತುಕತೆ ನೆಡೆದಿದೆ ಎನ್ನುವಾಗ ನೀವು ಹಾಜರಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. 14 ನೇ ತಾರೀಖಿಗೆ ಬಾಂಡ್ ಬರಹಗಾರರ ಹತ್ತಿರ ಹೋಗಿದ್ದರು ಎಂದು ಹೇಳಿದ್ದೀರಿ ಆಗ ನೀವು ಅಲ್ಲಿ ಹಾಜರು ಇದ್ದೀರಾ ಎಂದರೆ ಇಲ್ಲ ನನ್ನ ತಂದೆ ಎಲ್ಲಾ ಹೇಳಿದ್ದಾರೆ ಎಂದು ಹೇಳುತ್ತಾರೆ. ನೀವು ಖರೀದಿ ಕರಾರು ಪತ್ರ ನೋಂದಣಿ ಆಗಿದೆ ಎಂದು ಹೇಳುವ ದಿನಾಂಕದಂದು ನಾನು ನೋಂದಣಿಧಿಕಾರಿ ಮುಂದೆ ಹಾಜರು ಇರಲಿಲ್ಲ. ನೀವು ದಾಖಲೆ ಆಧಾರದ ಮೇಲೆ ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆ ವ್ಯವಹಾರ ಆಗುವಾಗ ಎಲ್ಲಾ ನಮ್ಮ ಜೊತೆ ಮಾತುಕತೆ ಮಾಡಿಕೊಂಡು ವ್ಯವಹಾರ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ

ನನ್ನ ತಂದೆ ದಿಃ 04/10/2018 ರಂದು ತೀರಿಕೊಂಡಿದ್ದಾರೆ. ಅವರು ಅನಾರೋಗ್ಯದಿಂದ ತೀರಿಕೊಂಡಿದ್ದರು ಎಂದು ಹೇಳುತ್ತಾರೆ. ಅವರು ಹಾಸಿಗೆ ಹಿಡಿದು ತೀರಿಕೊಂಡಿದ್ದರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಅವರು ಸಾಯುವವರೆಗೆ ವ್ಯಾಪಾರ ಮಾಡಿಕೊಂಡು ಇದ್ದರು. ನಮಗೆ ಸೇರಿದ ಗಣೇಶ ಟ್ರೇಡಿಂಗ್ ಕಂಪನಿ, ಖರೀದಿ ಮತ್ತು ದಲ್ಲಾಳಿ ಅಂಗಡಿ ಇದೆ. ಸದರಿ ಕಂಪನಿ proprietorship co. ಆಗಿದೆ . ಸಾಕ್ಷಿ ಮುಂದುವರೆದು HUF ಕಂಪನಿ ಎಂದು ಹೇಳುತ್ತಾರೆ. ಸದರಿ ಕಂಪನಿಯಲ್ಲಿ ನಮ್ಮ ಕುಟುಂಬದವರು ಎಲ್ಲರೂ ಶೇರುದಾರರು ಆಗಿದ್ದಾರೆ ಎಂದರೆ ಸರಿ. ನಿಪಿಃ 3 ನೀವು ಕ್ರಯ ಕರಾರು ಪತ್ರ ಆಗಿದೆ ಎಂದು ಹೇಳುವಂತ ದಾಖಲೆ 3 ಪುಟದ ಪ್ರಿಟೆಂಡ್ ದಾಖಲೆ ಆಗಿದೆ ಎಂದರೆ ಸರಿ. ಸದರಿ ನಿಪಿಃ 3 ರ ಮೊದಲನೆ ಮತ್ತು ಮೂರನೆ

ಪುಟದಲ್ಲಿ ನಿಮ್ಮ ತಂದೆಯವರ ಸಹಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆಯವರ 2 ನೇ ಪುಟದಲ್ಲಿ ಫೋಟೋ ಮತ್ತು ಸಹಿ ಇದೆ ಎಂದು ಹೇಳುತ್ತಾರೆ. ನಿಪಿಃ 13 ರಲ್ಲಿ ಪಹಣಿಯ ಕ್ರಮಾಂಕ 11 ರಲ್ಲಿ 12 ಮತ್ತು 13 ಲಕ್ಷ ಸಾಲದ ಭೋಜಾ ಇದೆ ಎಂದು ಬರೆಯಲಾಗಿದೆ ಎಂದರೆ ಸರಿ. ಅದೇ ರೀತಿ ನಿಪಿಃ 14 ರಲ್ಲಿ ಭೋಜಾ ಇದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಹೌದು ಎಂದು ಹೇಳಿ, ಅದು ಸರ್ಕಾರದ ಭೋಜಾ ಎಂದು ಹೇಳುತ್ತಾರೆ. ನನ್ನ ಪ್ರಕಾರ ನಮ್ಮ ಪಾಲಿಗೆ 11 ಎಕರೆ ಜಮೀನು ಬರುತ್ತದೆ. ಈ ಭೂಮಿಯಲ್ಲಿ ಕಡಲೆ ಮತ್ತು ಹೆಸರು ಬೆಳೆಯುತ್ತೇವೆ. ನಾವು ಸ್ವತಹಃ ಜಮೀನು ಮಾಡುವುದಿಲ್ಲ ಲಾವಣಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. 2011-12 ರಲ್ಲಿ 36,000/- ಲಾವಣಿ ಬರುತ್ತಿತ್ತು. ಸಾಕ್ಷಿ ಮುಂದುವರೆದು ಅರ್ಧ ಲಾಭ ನಾವು ತೆಗೆದುಕೊಳ್ಳುತ್ತೇವೆ ಅರ್ಧ ಲಾಭ ಲಾವಣಿದಾರರು ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. 2012-13 ರಲ್ಲಿ 40,000/- ಲಾವಣಿ ಬರುತ್ತಿತ್ತು. ಸದರಿ ಹಣವನ್ನು ನಗದು ರೂಪದಲ್ಲಿ ನಮಗೆ ಕೊಡುತ್ತಿದ್ದರು.

ನಿಪಿಃ 17 ಬ್ಯಾಲೆನ್ಸ ಶೀಟ್ 2011-12 ನೇ ವರ್ಷದಲ್ಲಿ ಮಾಡಿದ್ದೇವೆ. ನಿಪಿಃ 17 ನಮ್ಮ ಅಕೌಂಟಟ್ ತಯಾರು ಮಾಡಿದ್ದಾರೆ. ಅವರ ಸಹಿ ಮತ್ತು ಶೀಲು ಇಲ್ಲ. ಅದರ ಮೇಲೆ ಇರುವ ಶೀಲು ಮತ್ತು ಸಹಿ ನನ್ನದು ಎಂದು ಹೇಳುತ್ತಾರೆ. 2011-12 ರಲ್ಲಿ ಆದಾಯ ತೆರಿಗೆ ಕಟ್ಟಿದ್ದೇವೆ. ಅದೇ ರೀತಿ 2012-13 ರ ಸಹ ಆದಾಯ ತೆರಿಗೆ ಕಟ್ಟಿದ್ದೇವೆ. ನೀವು ಆದಾಯ ತೆರಿಗೆ verification acknowldgment ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ನನಗೆ ಅಭ್ಯಂತರ ಇಲ್ಲ ಎಂದು ಹೇಳುತ್ತಾರೆ. ಫಾರ್ಮ ನಂ.26 A S ಅಂದರೆ credit statement ಆದಾಯ ತೆರಿಗೆಯವರು ನೀಡಿದ್ದು ಅದನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ 2011-12, 2012-13 ರಲ್ಲಿ ನನ್ನ ತಂದೆ ಇದ್ದರು, ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿಃ 17 ನಿಮ್ಮ ಅಕೌಂಟಟ್ ತಯರಿಸಿದ್ದನ್ನು ನೀವು ಸೀಲು ಸಿಕ್ ಹಾಕಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಿ ಎಂದರೆ ಸಾಕ್ಷಿ ನಮ್ಮ ಅಕೌಂಟಟ್ ನೆಡೆದ ವ್ಯವಹಾರದ ಬಗ್ಗೆ ಬರೆದಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಅಕೌಂಟಟ್ ನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸಲು ಅಭ್ಯಂತರ ಇಲ್ಲ ಎಂದರೆ ಇಲ್ಲ ಎಂದು ಹೇಳುತ್ತಾರೆ. ನಿಪಿಃ 17 ಲೈಸನ್ಸ ಹೊಂದಿದ CA ಕೊಟ್ಟರೆ ಮಾತ್ರ ಕಾನೂನುಬದ್ಧವಾಗಿರುತ್ತದೆ ಎಂದರೆ ಸರಿ.

ನಾನು ಈಗ ವ್ಯಾಪಾರ ಮಾಡುತ್ತಿದ್ದೇನೆ. 20,000/- ಕ್ಕಿಂತ ಹೆಚ್ಚಿನ ಹಣದ ವ್ಯವಹಾರ ಮಾಡಬೇಕಾದರೆ ಚೆಕ್ಕು ಅಥವಾ ಡಿ ಡಿ ಅಥವಾ ಆರ್ ಟಿ ಜಿ ಎಸ್ ಮಾಡಬೇಕು ಎಂಬ ಕಾನೂನು ಇದೆ ಎಂದರೆ ಸರಿ. ನಿಮ್ಮ ತಂದೆಯವರಿಗೂ ಸಹ ಇದರ ಬಗ್ಗೆ ಜ್ಞಾನ ಇತ್ತು ಎಂದರೆ ಸರಿ. ನಿಮ್ಮ ತಂದೆಯ ಅಕೌಂಟ ಸ್ಟೇಟ್ ಮೆಂಟ್ ಹಾಜರು ಮಾಡಿದ್ದು ಅದರ 2 ನೇ ಪುಟದಲ್ಲಿ 2012 ರ 10 ನೇ ತಿಂಗಳ ನಂತರ ಯಾವುದೇ withdrawls ಇಲ್ಲ ಎಂದರೆ ಸರಿ. ಅಂದರೆ ಅಕ್ಟೋಬರ 2012 ರಿಂದ ದಿಃ 30/03/2013 ರ ಒಳಗೆ ಯಾವುದೇ withdrawls ಇಲ್ಲ ಎಂದರೆ ಸರಿ.

**ಮುಂದಿನ ಪಾಟೀಸವಾಲಿಗೆ ಕಾಲವಕಾಶ ಕೇಳಿದ್ದು, ಆಲಿಸಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
25.06.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**